2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ರಾಮನಗರ, ಕನಕಪುರದಲ್ಲಿ

**S.C.5028/2022**

| | | |
|---|---|---|
| ಪಿರ್ಯಾದಿ | | ಸಾತನೂರು ಪೊಲೀಸ್ ಠಾಣೆ |
| ವಿರುದ್ಧ | | |
| ಆರೋಪಿ | 1 | ಸುಮಿತ್ರ<br>ಕೋಂ ಲೇಟ್ ಸಿದ್ದಬೀರಯ್ಯ,<br>ವಯಸ್ಸು 42 ವರ್ಷ,<br>ವಾಸಃ-<br>ದೂಂಥೂರು ಗ್ರಾಮ,<br>ಸಾತನೂರು ಹೋಬಳಿ,<br>ಕನಕಪುರ ತಾಲ್ಲೂಕು,<br>ರಾಮನಗರ ಜಿಲ್ಲೆ. |

**ದೋಷಾರೋಪಣೆ**

ನಾನು ಶ್ರೀ ಕುಮಾರ್.ಹೆಚ್.ಎನ್., ಬಿ.ಎ.ಎಲ್., ಎಲ್‌ಎಲ್.ಬಿ., 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ, ಕನಕಪುರದಲ್ಲಿ, ಈ ಮೂಲಕ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪ ಮಾಡುತ್ತೇನೆ.

*****

ನೀವು ಆರೋಪಿ-1 ಮತ್ತು ಮೃತ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯ ಪತಿಪತ್ನಿಯರಾಗಿದ್ದು, ಹೀಗಿರುವಾಗ ಕಳೆದ 11 ವರ್ಷಗಳ ಹಿಂದೆ ಮೃತ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯನಿಗೆ 2 ನೇ ಆರೋಪಿಯ ಪರಿಚಯವಾಗಿದ್ದು, ಈ ಪರಿಚಯದಿಂದ ಆರೋಪಿ-2 ರವರು ಮೃತ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯನ ಮನೆಗೆ ಹೋಗಿ ಬಂದು ಮಾಡುತ್ತಿದ್ದು, ಈ ಸಮಯದಲ್ಲಿ ನೀವು ಆರೋಪಿ-1 ರವರಿಗೆ 2 ನೇ ಆರೋಪಿಯ ಪರಿಚಯವಾಗಿ ಸದರಿ ಪರಿಚಯ ಅಕ್ರಮ ಸಂಬಂಧಕ್ಕೆ ತಿರುಗಿ ನೀವು ಆರೋಪಿ-1 ರವರು 2 ನೇ ಆರೋಪಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು, ಸದರಿ ಅಕ್ರಮ ಸಂಬಂಧದ ವಿಚಾರವು ಮೃತ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯನಿಗೆ ತಿಳಿದಿದ್ದು, ಈ ವಿಚಾರ ತಿಳಿದ ಮೃತ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯ ಪ್ರತಿದಿನ ಮದ್ಯಪಾನ ಮಾಡಿಕೊಂಡು ಬಂದು ನೀವು ಆರೋಪಿ-1 ರವರ ಮೇಲೆ ಗಲಾಟೆ ಮಾಡಿ ಕಿರುಕುಳ

ನೀಡಿ ನಿಮ್ಮ ಮತ್ತು 2 ನೇ ಆರೋಪಿಯ ಅಕ್ರಮ ಸಂಬಂಧಕ್ಕೆ ಅಡ್ಡಿಪಡಿಸಿದ್ದು, ಇದೇ ವಿಚಾರದಲ್ಲಿ ದಿಃ29.08.2018 ರಂದು ಸಂಜೆ 7-00 ಗಂಟೆ ಸಮಯದಲ್ಲಿ ಮೃತ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯರವರು ನೀವು ಆರೋಪಿ-1 ರವರ ಜೊತೆ ಪುನಃ ಗಲಾಟೆ ಮಾಡಿ ಕಿರುಕುಳ ನೀಡುತ್ತಿದ್ದಾಗ, ನೀವು ಆರೋಪಿ-1 ರವರು 2 ನೇ ಆರೋಪಿಯನ್ನು ಮನೆಗೆ ಕರೆಸಿಕೊಂಡು ಮೃತ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯ ಜೀವಂತವಾಗಿದ್ದರೆ ಕಿರುಕುಳ ಕೊಡುವುದು ಮತ್ತು ತಮ್ಮ ಅಕ್ರಮ ಸಂಬಂಧಕ್ಕೆ ಅಡ್ಡಿಯುಂಟು ಮಾಡುತ್ತಾನೆ ಅಂತ ಹೇಳಿ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯನನ್ನು ಕೊಲೆ ಮಾಡಲು ಕೇಳಿಕೊಂಡು, ದಿಃ29.08.2018 ರಂದು ರಾತ್ರಿ 11-10 ರಿಂದ 11-30 ಗಂಟೆ ಸಮಯದಲ್ಲಿ ನೀವು ಆರೋಪಿ-1 ರವರು 2 ನೇ ಆರೋಪಿಯೊಂದಿಗೆ ಸೇರಿಕೊಂಡು ಮದ್ಯದ ಅಮಲಿನಲ್ಲಿ ಮನೆಯ ರೂಮ್‌ನಲ್ಲಿ ಮಲಗಿದ್ದ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯನ ಕುತ್ತಿಗೆಯನ್ನು ನೀಲಿ ಬಣ್ಣದ ಸೀರೆಯಿಂದ ಸುತ್ತಿ ಜೀರಿ ಕೊಲೆ ಮಾಡಿ ಸಾಯಿಸಿ ಭಾರತೀಯ ದಂಡ ಸಂಹಿತೆ ಕಲಂ 302 ಸಹವಾಚಕ 34 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ಎರಡನೆಯದಾಗಿ, ಸದರಿ ದಿನ, ಸ್ಥಳ ಮತ್ತು ಸಮಯದಲ್ಲಿ ನೀವು ಆರೋಪಿ-1 ರವರು 2 ನೇ ಆರೋಪಿಯೊಂದಿಗೆ ಸೇರಿಕೊಂಡು ಮೃತ ಪುಟ್ಟಸ್ವಾಮಿ ಉಃ ಸಿದ್ದಬೀರಯ್ಯರವರು ನೇಣು ಹಾಕಿಕೊಂಡು ಮೃತಪಟ್ಟಿರುವುದಾಗಿ ಸುಳ್ಳು ಸುದ್ದಿಯನ್ನು ಹಬ್ಬಿಸಿ, ಕೊಲೆಗೆ ಬಳಸಿದ್ದ ನೀಲಿ ಬಣ್ಣದ ಸೀರೆಯನ್ನು ನಾಶಪಡಿಸಿ ಕೃತ್ಯವನ್ನು ಮರೆಮಾಚಿ ಭಾರತೀಯ ದಂಡ ಸಂಹಿತೆ ಕಲಂ 201 ಸಹವಾಚಕ 34 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎನ್ನುವುದಾಗಿದೆ.

ನಾನು ಈ ಮೂಲಕ ಸದರಿ ಆರೋಪಣೆಗಾಗಿ ನಿಮ್ಮನ್ನು ವಿಚಾರಣೆಗೆ ಒಳಪಡಲು ನಿರ್ದೇಶಿಸುತ್ತೇನೆ.

**(ಕುಮಾರ್ ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.

ದಿಃ22.10.2024.